ಮೂಲ ದಾವಾ ಸಂಖ್ಯೆ. 115/2016 ಪಿ ಡಬ್ಲ್ಯೂ 2

(ದಿನಾಂಕ 06-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ಈ ದಾವೆಯನ್ನು ಭಾಸ್ಕರ ರಾವ್ ಇವರ ಮೇಲೆ ನಾವು ದಾಖಲಿಸಿದ್ದು ಇರುತ್ತದೆ. ಭಾಸ್ಕರ ರಾವ್ ಇವರು ಪೈಪ್ ಲೈನ್ ಮಾಡಿಸಿರುವ ವಿಚಾರಕ್ಕಾಗಿ ಈ ದಾವೆಯನ್ನು ದಾಖಲಿಸಿದ್ದೇವೆ. ಬನ್ನಿಕಲ್ಲು ಗ್ರಾಮದ ಸೋಮೇಶ್ವರ ಕೆರೆಯಿಂದ ಹಂಪಸಾಗರದ ತುಂಗಭದ್ರಾ ನದಿಗೆ ಒಂದು ಹಳ್ಳ ಹರಿಯುತ್ತದೆಂದರೆ ಸರಿ. ಸದರಿ ಹಳ್ಳದಲ್ಲಿ ತುಂಗಭದ್ರಾ ನದಿಯಿಂದ ತನ್ನ ಜಮೀನಿನ ಮೀನಿನ ಕೆರೆಯವರೆಗೂ ಪೈಪ್ ಲೈನ್ ಮಾಡಿಕೊಂಡು ಬಂದಿರುತ್ತಾರೆಂದರೆ ಸರಿ. ಅದೇ ರೀತಿ ಸದರಿ ಹಳ್ಳದ ಮೂಲಕ ಬೇರೆ ಬೇರೆ ರೈತರು ತಮ್ಮ ಜಮೀನುಗಳಿಗೆ ಪೈಪ್ ಲೈನ್ ಮಾಡಿಕೊಂಡು ಬಂದಿರುತ್ತಾರೆಂದರೆ ಸರಿ. ನಮ್ಮ ಜಮೀನುಗಳ ಮೂಲಕ ಭಾಸ್ಕರರಾಜು ಇವರು ಯಾವುದೇ ಪೈಪ್ ಲೈನನ್ನು ಹಾಕಿಕೊಂಡು ಹೋಗಿರುವುದಿಲ್ಲ. ಭಾಸ್ಕರರಾಜು ಇವರು ಪೈಪ್ ಲೈನ್ ಹಾಕಿಕೊಂಡು ಹೋಗುವಾಗ ನಾನು ಹಾಜರಿದ್ದೆ. ನಮ್ಮ ಗ್ರಾಮದ ಇತರೆ ರೈತರು ಅದೇ ಹಳ್ಳದಲ್ಲಿ ಪೈಪ್ ಲೈನ್ ಹಾಕಿಕೊಂಡು ಹೋದ ಬಗ್ಗೆ ನಾನಾಗಲೀ, ಉಳಿದ ವಾದಿಯರಾಗಲೀ ಯಾವುದೇ ದಾವೆಯನ್ನು ದಾಖಲಿಸಿರುವುದಿಲ್ಲ. ಸದರಿ ಪೈಪ್ ಲೈನ್ ಹಾಕಲು ನೀರಾವರಿ ಇಲಾಖೆಯಿಂದ 1ನೇ ಪ್ರತಿವಾದಿಯು ಅನುಮತಿ ಪಡೆದಿರುತ್ತಾನೆಂದರೆ ಸರಿ. ಸದರಿ ಪೈಪ್ ಲೈನ್ ಹಾಕುವ ಸಮಯದಲ್ಲಿ 1ನೇ ಪ್ರತಿವಾದಿಯು ಪೂಜಾ ಕಾರ್ಯಕ್ರಮ ನೆರವೇರಿಸಿ 1ನೇ ವಾದಿಗೆ ಪೂಜೆಗೆ ಕರೆದು ಅವರಿಂದನೇ ಪೂಜೆ ಸಹಾ ಮಾಡಿಸಿದ್ದು ಇರುತ್ತದೆಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಹಾಜರಿರಲಿಲ್ಲವೆನ್ನುತ್ತಾರೆ.

ನಾನು ಮತ್ತು ಉಳಿದ ವಾದಿಯರು ಒಂದೇ ಊರಿನವರು ಮತ್ತು ಒಬ್ಬರಿಗೊಬ್ಬರು ಸಂಬಂಧಿಕರು ಎಂದರೆ ಸರಿ. ನಮ್ಮ ಗ್ರಾಮದಲ್ಲಿ 3 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ ಎಂದರೆ ಸರಿ.

(ಈ ಹಂತದಲ್ಲಿ 1ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ